SC:75/2017
PW:01 CW:01

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 75/2017

| | |
|---|---|
| PW | 01 |
| CW | 01 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 26.09.2025.

| | | |
|---|---|---|
| ಸಾಕ್ಷಿಯ ಹೆಸರು | : | ಸುಬ್ರಮಣ್ಯಂ |
| ತಂದೆಯ ಹೆಸರು | : | ಪಳನಿಯಪ್ಪ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಜಮೀನ ಉತ್ತುಕೊಳಿ ಗ್ರಾಮ , ಕೊಲ್ಲಾಚಿ ತಾಲ್ಲೂಕು , ಕೊಯಮತ್ತೂರ್ ಜಿಲ್ಲೆ |

(ಸಾಕ್ಷಿದಾರರು ತನಗೆ ತೆಲುಗು ಭಾಷೆ ಬರುತ್ತಿದ್ದು ಕನ್ನಡ ಭಾಷೆ ಬರುವುದಿಲ್ಲ ಎಂದು ತಿಳಿಸಿದ್ದು, ಅದಕ್ಕಾಗಿ ಶ್ರೀ.ಬಿ.ಆರ್.ಎಂ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು.)

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:'**

ನನಗೆ ಚಾಸಾ.2, 3 ರವರ ಪರಿಚಯ ಇದ್ದು ಈ ಕೇಸಿನ ಉಳಿದ ಸಾಕ್ಷಿದಾರರ ಪರಿಚಯ ಇಲ್ಲ. ಕೃತ್ಯ ನಡೆದು 9 ವರ್ಷ ಆಗಿರುವ ಕಾರಣ ಈ ದಿನ ನ್ಯಾಯಾಲಯದ

ಮುಂದೆ ಹಾಜರಿರುವ 1,3,5,6 ನೇ ಆರೋಪಿತರನ್ನು ಗುರುತಿಸಲು ಆಗುವುದಿಲ್ಲ. ನಾನು ಬೆಲ್ಲದ ವ್ಯಾಪಾರಿ ಆಗಿದ್ದು ವ್ಯಾಪಾರಕ್ಕಾಗಿ ತಮಿಳುನಾಡಿನಿಂದ ಚಿಕ್ಕಬಳ್ಳಾಪುರಕ್ಕೆ ಬರುತ್ತೇನೆ. ನಾನು ಬೆಲ್ಲವನ್ನು ಚಾಸಾ.2 ಮತ್ತು 3 ರವರಿಗೆ ಸರಬರಾಜು ಮಾಡುತ್ತೇನೆ. ನಾನು ಬೆಲ್ಲ ಸರಬರಾಜು ಮಾಡಲು ಚಾಸಾ.2 ರವರಿಂದ 1 ಲಕ್ಷ ಚಿಲ್ಲರೆ ಹಣ ಹಾಗೂ ಚಾಸಾ.3 ರವರಿಂದ 5 ಲಕ್ಷ ಚಿಲ್ಲರೆ ಹಣ ಮುಂಗಡವಾಗಿ ಸುಮಾರು 9 ವರ್ಷದ ಹಿಂದೆ ಸಂಜೆ 5.00 ಗಂಟೆಗೆ ಪಡೆದಿದ್ದೆನು. ಅದರಂತೆ ಚಾಸಾ.2 ಮತ್ತು 3 ರವರಿಂದ ಒಟ್ಟು ರೂ. 7,03,100/- ಮುಂಗಡ ಹಣವನ್ನು ಪಡೆದು ಒಂದು ಬ್ಯಾಗ್‌ನಲ್ಲಿ ಇಟ್ಟುಕೊಂಡು ನಮ್ಮ ಊರಿಗೆ ಹೋಗಲು ಬೆಂಗಳೂರಿನ ಬಸ್ ನ್ನು ಸಂಜೆ 6.00 ಗಂಟೆಗೆ ಹತ್ತಿರುತ್ತೇನೆ. ಆ ಸಮಯದಲ್ಲಿ ಉಳಿದ ಪ್ರಯಾಣಿಕರೊಂದಿಗೆ ಮೂರು ಜನರು ಬಸ್ ನಲ್ಲಿ ಪ್ರಯಾಣಿಸುತ್ತಿದ್ದು ಉಳಿದ 6 ಜನರು ಒಂದು ಕಾರಿನಲ್ಲಿ ಬಸ್ಸಿನ ಹಿಂದೆ ಬಂದಿರುತ್ತಾರೆ.

2. ಬಸ್ಸಿನಲ್ಲಿ ಇದ್ದ 3 ಜನರ ಪೈಕಿ ಒಬ್ಬ ವ್ಯಕ್ತಿ ನನಗೆ ಕತ್ತಿಯನ್ನು ತೋರಿಸಿ ಹಣ ಇದ್ದ ಬ್ಯಾಗ್ ಅನ್ನು ಕೊಡುವಂತೆ ಕೇಳಿರುತ್ತಾರೆ. ನಂತರ ನನ್ನ ಬಳಿ ಇದ್ದ ಹಣದ ಬ್ಯಾಗ್ ಅನ್ನು ಆ ವ್ಯಕ್ತಿಗಳು ಕಿತ್ತುಕೊಂಡು ಬಸ್ ನಿಂದ ಇಳಿದಿರುತ್ತಾರೆ. ಬಸ್ಸಿನಲ್ಲಿ ಇದ್ದ ಚಾಲಕ ಬಸ್ ಅನ್ನು ನಿಲ್ಲಿಸಿದ ಕೂಡಲೆ ಆ ವ್ಯಕ್ತಿಗಳು ಬಸ್ ನಿಂದ ಓಡಿಹೋಗಿರುತ್ತಾರೆ. ನಂತರ ಬಸ್ಸು ವಾಪಸ್ಸು ಚಿಕ್ಕಬಳ್ಳಾಪುರಕ್ಕೆ ಬಂದಾಗ ನಾನು ಇಳಿದು ನಂತರ ನಮ್ಮ ಊರಿಗೆ ಹೋಗಿರುತ್ತೇನೆ. 6 ದಿವಸ ಆದ ನಂತರ ನಾನು ಚಿಕ್ಕಬಳ್ಳಾಪುರಕ್ಕೆ ಬಂದು ದೂರು ದಾಖಲಿಸಿರುತ್ತೇನೆ. ಸಾಕ್ಷಿದಾರರು

ತಾನು ನೀಡಿದ ದೂರು, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

3. ನಂತರ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತಾರೆ. ಸಾಕ್ಷಿದಾರರು ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಕೃತ್ಯ ಸ್ಥಳವನ್ನು ನಾನೇ ಪೊಲೀಸರಿಗೆ ತೋರಿಸಿರುತ್ತೇನೆ. ನಿಪಿ–2 ಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ನೆನಪು ಇಲ್ಲ. ಆ ದಿನ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ 3 ಜನ ವ್ಯಕ್ತಿಗಳನ್ನು ಬಹಳ ದಿವಸ ಆದ ಕಾರಣ ನನಗೆ ಗುರುತಿಸಲು ಆಗುವುದಿಲ್ಲ. ಸಾಕ್ಷಿದಾರರು ದಿಃ 16.03.2017 ರ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

4. ಆ ದಿನ ಬಸ್ ಅನ್ನು ಹಿಂಭಾಲಿಸಿಕೊಂಡು ಬಂದ ಕಾರನ್ನು ನೋಡಿದಲ್ಲಿ ಗುರುತಿಸುತ್ತೇನೆ. ನನ್ನಿಂದ ದೋಚಿಕೊಂಡ ಹೋದ ಹಣ ಇಲ್ಲಿಯವರೆಗೂ ಪತ್ತೆ ಆಗಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಹೆಚ್ಚಿನ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.

SC:75/2017
PW:01 CW:01

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 26.09.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.